# ಅಜ್ಜನ ಗಡ್ಡದ ತಿರುಳು: ಇನ್ನೊಬ್ಬರ ನೆರಳಿನಲ್ಲಿ ಬದುಕ ಬಾರದು!



**ಶ್ರೀವಲ್ಲಿ ರೈ ಮಾರ್ಟೆಲ್**

ಬೇಸಿಗೆಯಲ್ಲಿ ಗುಗ್ಗುಲಿ, ಕರಿಮರ, ಅಜ್ಜನ ಗಡ್ಡದಂತಹ ಕೆಲವು ಮರದ ಬೀಜಗಳು ಗಾಳಿಯಲ್ಲಿ ತೇಲುತ್ತಾ, ಸುರುಳಿ ಸುತ್ತುತ್ತಾ ದೂರಕ್ಕೆ ಹಾರಿ ಹೋಗುವುದನ್ನು ನಾವು ನೋಡುತ್ತೇವೆ. ಇದರ ಹಿಂದೆ ಪ್ರಕೃತಿಯ ಒಂದು ದೊಡ್ಡ ಪಾಠವಿದೆ.

ಒಬ್ಬ ಅಜ್ಜ ತನ್ನ ಮೊಮ್ಮಗನನ್ನು ಸ್ವಲ್ಪ ದೂರದ ಆಲದ ಮರದ ಬೀಳಿನಲ್ಲಿ ಜೀಕಲು ಅಂದರೆ ಆಡಿಸಲು ಕರೆದುಕೊಂಡು ಹೋಗುತ್ತಾರೆ. ಆಗ ಮೊಮ್ಮಗ ಆಲದ ಮರದ ಕೆಳಗೆ ಬಿದ್ದಿರುವ ಹಣ್ಣುಗಳನ್ನು ನೋಡಿ ಅಜ್ಜನಲ್ಲಿ ಕೇಳುತ್ತಾನೆ: "ಈ ಬೀಜಗಳೆಲ್ಲಾ ಮೊಳೆತರೆ ಈ ಊರಿಡೀ ಆಲದ ಮರಗಳೇ ತುಂಬಿರಬೇಕಿತ್ತಲ್ಲವೇ ಅಜ್ಜ? ಆದರೆ ಹಾಗೆ ಆಗಿಲ್ಲವೇಕೆ?"

ಆಗ ಅಜ್ಜ ಗಾಳಿಯಲ್ಲಿ ತೇಲಿ ಹೋಗುತ್ತಿದ್ದ ಒಂದು ಅಜ್ಜನ ಗಡ್ಡ ವನ್ನು ಅಂದರೆ ಬಿಳಿ ನಾರಿನಂತಿರುವ ಬೀಜವನ್ನು ಹಿಡಿದು ಮೊಮ್ಮಗನ ಕೈಗೆ ಕೊಟ್ಟು ಹೀಗೆ ಹೇಳುತ್ತಾರೆ.

"ಮಕ್ಕಳೂ ಯಾವಾಗಲೂ ಈ ಅಜ್ಜನ ಗಡ್ಡದಂತಿರಬೇಕು. ಅಪ್ಪಅಮ್ಮನ ನೆರಳನ್ನು ಬಿಟ್ಟು ದೂರ ಹೋಗಿ ಬೆಳೆಯಬೇಕು. ಆಗಲೇ ಅವರಿಗೆ ಬೇಕಾದಷ್ಟು ಜಾಗ, ನೀರು ಮತ್ತು ಬಿಸಿಲಿನ ಅವಕಾಶ ಸಿಗುವುದು. ಆಲದ ಮರದ ಬೀಜದಂತೆ ಅದರ ಬುಡದಲ್ಲೇ ಇದ್ದರೆ ಅವು ಬೆಳೆಯುವುದಿಲ್ಲ, ಅಲ್ಲಿಯೇ ಕೊಳೆತು ಹೋಗುತ್ತವೆ. ಅದಕ್ಕಾಗಿಯೇ ಆಲದ ಮರವು ತನ್ನ ಬೀಜದಿಂದ ಅಲ್ಲಿಯೇ ಮೊಳೆಯದೆ, ತನ್ನ ವಿಸ್ತಾರಕ್ಕಾಗಿ ಬಿಳಲುಗಳನ್ನು ಅಂದರೆ ನೇತಾಡುವ ಬೇರುಗಳಿಂದ ಬೆಳೆಯಲು ನೋಡುತ್ತದೆ." ಎಂದು ಆಲದ ಮರದ ಬಿಳಲುಗಳನ್ನುತೋರಿಸುತ್ತಾರೆ.

ಮಕ್ಕಳು ಸ್ವಂತ ಬುದ್ಧಿಯಿಂದ ಬೆಳೆಯಬೇಕಾದರೆ ಅಪ್ಪಅಮ್ಮನ ನೆರಳಿನಿಂದ ಹೊರಬಂದು ಸ್ವಾವಲಂಬಿಗಳಾಗಬೇಕು. ಆಗಲೇ ಅವರಿಗೆ ಧೈರ್ಯ, ಬುದ್ಧಿಶಕ್ತಿ ಮತ್ತು ಹೆಚ್ಚಿನ ಅವಕಾಶಗಳು ಸಿಗುತ್ತವೆ. ಹೇಗೆ ಗಾಳಿಯಲ್ಲಿ ಹಾರುವ ಬೀಜಗಳು ಊರಿಡೀ ಹರಡಿ ತಮ್ಮ ಸಂತತಿಯನ್ನು ಬೆಳೆಸುತ್ತವೆಯೋ, ಮನುಷ್ಯನೂ ಹಾಗೆಯೇ ಹೊರಜಗತ್ತಿಗೆ ತೆರೆದುಕೊಳ್ಳಬೇಕು.ಹೇಗೆ ಒಂದು ಸಣ್ಣ ಬೀಜವು ದೊಡ್ಡ ಮರದ ನೆರಳಿನಲ್ಲಿದ್ದರೆ ಅದಕ್ಕೆ ಸರಿಯಾದ ಬೆಳಕು ಮತ್ತು ಪೋಷಕಾಂಶ ಸಿಗದೆ ಸೊರಗಿ ಹೋಗುತ್ತದೆಯೋ,

,ಹಾಗೆಯೇ ಮನುಷ್ಯನೂ ಅತಿಯಾದ ಅವಲಂಬನೆಯನ್ನು ಬಿಟ್ಟು ಹೊರಬಂದಾಗ ಮಾತ್ರ ತನ್ನ ಪೂರ್ಣ ಸಾಮರ್ಥ್ಯವನ್ನು ತೋರಿಸಲು ಸಾಧ್ಯ.
ನಾವು ಚಿಕ್ಕಂದಿನಲ್ಲೇ ಅಪ್ಪಅಮ್ಮನನ್ನು ಬಿಟ್ಟು ಮುಂಬೈನಂತಹ ನಗರಗಳಿಗೆ ಹೋಗಿ ದೊಡ್ಡ ಶ್ರೀಮಂತರಾಗಿರುವವ ರನ್ನು ನೋಡಿದಾಗ ನಮಗೆ ಪ್ರಕೃತಿಯ ಈ ಸತ್ಯದ ಗುಟ್ಟು ಅರ್ಥವಾಗುತ್ತದೆ.

**ಕಥೆಯ ನೀತಿ :**
**"ಸ್ವಂತ ಕಾಲಿನ ಮೇಲೆ ನಿಂತು ಸಾಧನೆ ಮಾಡಬೇಕೆಂದರೆ, ಸೌಕರ್ಯದ ಗೂಡಿನಿಂದ (Comfort Zone) ಹೊರಬರಲೇಬೇಕು."**